# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್. ರಸ್ತೆ, ತುಮಕೂರು-572 103 ☎ : 0816-2255650, 227351 ಫ್ಯಾಕ್ಸ್ :0816-2270719

ಸಂಖ್ಯೆ:ತುವಿ:ಪವಿ:2023-24 : 341 ದಿನಾಂಕ:28.07.2023

## : ಅಧಿಸೂಚನೆ :

**ವಿಷಯ** : 2022-23 ನೇ ಶೈಕ್ಷಣಿಕ ಸಾಲಿನ 2023 ರ ಆಗಸ್ಟ್ ಮಾಹೆಯಲ್ಲಿ ನಡೆಯಲಿರುವ ಸಿ.ಬಿ.ಸಿ.ಎಸ್. ಪಠ್ಯಕ್ರಮದಂತೆ UUCMS ತಂತ್ರಾಂಶದ ಮೂಲಕ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳಿಗೆ ಪ್ರವೇಶ ಪಡೆದಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ (ನವೀನ & ಪೂರಕ) ಪರೀಕ್ಷಾ ಶುಲ್ಕ ಪಾವತಿಸಿಕೊಳ್ಳುವ ಕುರಿತು.

ಉಲ್ಲೇಖ : ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ:14.07.2023

*****

2022-23 ನೇ ಶೈಕ್ಷಣಿಕ ಸಾಲಿನ 2023 ರ ಆಗಸ್ಟ್ ಮಾಹೆಯಲ್ಲಿ ನಡೆಯಲಿರುವ ಸಿ.ಬಿ.ಸಿ.ಎಸ್. ಪಠ್ಯಕ್ರಮದಂತೆ ಸ್ನಾತಕ ಶಿಕ್ಷಣ ಪದವಿಯ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಪದವಿಗೆ UUCMS ತಂತ್ರಾಂಶದ ಮೂಲಕ ಪ್ರವೇಶ ಪಡೆದಿರುವ (ಶೈಕಣಿಕ ವಿಭಾಗದಿಂದ ಪ್ರವೇಶಾನುಮೋದನೆ ಪಡೆದಿರುವ ವಿದ್ಯಾರ್ಥಿಗಳಿಂದ ಮಾತ್ರ) ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳ ಎಲ್ಲಾ ಅರ್ಹ (ನವೀನ & ಪೂರಕ) ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳುವುದು.

ಪ್ರಸಕ್ತ ಸಾಲಿನ ಸಿ.ಬಿ.ಸಿ.ಎಸ್. ಪಠ್ಯಕ್ರಮದಂತೆ ಸ್ನಾತಕ ಪದವಿಗಳ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳಿಗೆ ಪ್ರವೇಶಾತಿ ಪಡೆದ (ನವೀನ & ಪೂರಕ) ವಿದ್ಯಾರ್ಥಿಗಳ ಸಂಪೂರ್ಣ ದತ್ತಾಂಶವನ್ನು **ಸಮಗ್ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ** (UUCMS) ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದ್ದು, ಸದರಿ ತಂತ್ರಾಂಶದಲ್ಲಿ ವಿಶ್ವವಿದ್ಯಾನಿಲಯದಿಂದ ಹಿಡಿದು ಕಾಲೇಜಿನ ಪ್ರಾಂಶುಪಾಲರು, ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು, ವಿದ್ಯಾರ್ಥಿಗಳು ಇತ್ಯಾದಿ ಹಂತಗಳವರೆಗೆ ಸೂಕ್ತ ಜವಾಬ್ದಾರಿಗಳನ್ನು ಹಂಚಿಕೆ ಮಾಡಿ ಪ್ರತ್ಯೇಕ ಲಾಗಿನ್ ವಿವರಗಳನ್ನು ಒದಗಿಸಲಾಗಿರುತ್ತದೆ. ಇದೊಂದು ಹೊಸ ವ್ಯವಸ್ಥೆಯಾಗಿರುವುದರಿಂದ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ತಮ್ಮ ಕಾಲೇಜುಗಳ ಹಂತದಲ್ಲಿ ಸೂಕ್ತ ಮಾರ್ಗದರ್ಶನ ಮತ್ತು ಸಹಾಯ ಒದಗಿಸಲು ಸೂಚಿಸಲಾಗಿದೆ.

ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಪಾವತಿಸಿದ ವಿದ್ಯಾರ್ಥಿಗಳ ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಪರಿಶೀಲಿಸಿ UUCMS ತಂತ್ರಾಂಶದ ಮೂಲಕ ಅಂಗೀಕರಿಸುವುದು ಹಾಗೂ ವಿದ್ಯಾರ್ಥಿಗಳ ಪ್ರವೇಶಾನುಮೋದನೆ, ಪರೀಕ್ಷೆ ತೆಗೆದುಕೊಳ್ಳುವವರ ಅಂಕಿ-ಅಂಶಗಳನ್ನು ಬಾಹ್ಯವಾಗಿಯೂ ಕ್ರೋಢೀಕರಿಸಿ ವಿಶ್ವವಿದ್ಯಾನಿಲಯಕ್ಕೆ **ದಿನಾಂಕ:14.08.2023 ರೊಳಗೆ** ಈ ಕೆಳಕಂಡ ನಮೂನೆಯಂತೆ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

**<u>ನಮೂನೆ</u>**

| ಕ್ರ.ಸಂ. | ವಿದ್ಯಾರ್ಥಿಯ ಹೆಸರು | ನೋಂದಣಿ ಸಂಖ್ಯೆ | ತೆಗೆದುಕೊಂಡಿರುವ ವಿಷಯ | ಶುಲ್ಕ ಪಾವತಿಸಿದ ವಿವರ & ದಿನಾಂಕ |
|---|---|---|---|---|
| 1. | | | | |
| 2. | | | | |

(....02)

ಸೂಚನೆ : ಈ ಹಿಂದೆ ಸಿ.ಬಿ.ಸಿ.ಎಸ್. ಪದ್ಧತಿಯಲ್ಲಿ ಸಲ್ಲಿಸುತ್ತಿದ್ದ ಪರೀಕ್ಷಾ ಶುಲ್ಕದ ವಿವರವನ್ನು ಅನುಬಂಧ ಮತ್ತು ನಮೂನೆಗಳೆರಡರಲ್ಲಿಯೂ ಭರ್ತಿ ಮಾಡಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

## ಗಮನಿಸಬೇಕಾದ ದಿನಾಂಕಗಳು

| ಕ್ರ.ಸಂ. | ಪರೀಕ್ಷಾ ಶುಲ್ಕವನ್ನು ಪಾವತಿಸುವ ವಿವರಗಳು | ಅಧಿಸೂಚನೆ ದಿನಾಂಕ |
|---|---|---|
| 1. | ವಿದ್ಯಾರ್ಥಿಗಳಿಗೆ ದಂಡ ರಹಿತ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 03.08.2023 |
| 2. | ವಿದ್ಯಾರ್ಥಿಗಳಿಗೆ ರೂ. 100-00/- ದಂಡ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 05.08.2023 |
| 3. | ವಿದ್ಯಾರ್ಥಿಗಳಿಗೆ ರೂ. 500-00/- ವಿಶೇಷ ದಂಡ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 07.08.2023 |
| 4. | ಕಾಲೇಜಿನವರು, ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿದ ನಂತರ ಪರೀಕ್ಷಾ ಅರ್ಜಿಗಳನ್ನು UUCMS ತಂತ್ರಾಂಶದಲ್ಲಿ ಪರಿಶೀಲಿಸಿ ಅನುಮೋದಿಸಲು ಕೊನೆಯ ದಿನಾಂಕ | 11.08.2023 |
| 5. | ಕಾಲೇಜಿನವರು, ವಿದ್ಯಾರ್ಥಿಗಳು UUCMS ಮೂಲಕ ಪಾವತಿಸಿರುವ ಪರೀಕ್ಷಾ ಶುಲ್ಕದ ವಿವರಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 14.08.2023 |
| 6. | ಕಾಲೇಜಿನವರು UUCMS ನಲ್ಲಿ MAAC ಸಮಿತಿಯು ಪರಿಶೀಲಿಸಿದ ಆಂತರಿಕ ಅಂಕಗಳನ್ನು ಹಾಗೂ ವಿದ್ಯಾರ್ಥಿಗಳ ಹಾಜರಾತಿ ಮಾಹಿತಿಗಳನ್ನು ನಮೂದಿಸಲು ಕೊನೆಯ ದಿನಾಂಕ | 07.08.2023 |
| 7. | UUCMS ತಂತ್ರಾಂಶದ ಮೂಲಕ ಪ್ರವೇಶ ಪತ್ರ (Hallticket) ಪಡೆಯುವ ದಿನಾಂಕ | 14.08.2023 |
| 8. | ಸೈದ್ಧಾಂತಿಕ (Theory Exam) ಪರೀಕ್ಷೆಗಳು ನಡೆಯುವ ದಿನಾಂಕ | 17.08.2023 |

## ಪರೀಕ್ಷಾ ಶುಲ್ಕ

| ಕ್ರ.ಸಂ. | ಸೆಮಿಸ್ಟರ್ | ಕೋರ್ಸ್ | ಶುಲ್ಕ |
|---|---|---|---|
| 1. | ಪ್ರಥಮ ಮತ್ತು ತೃತೀಯ (ನವೀನ) | ಬಿ.ಇಡಿ. | ರೂ. 1000-00 (ನವೀನ) |
| 2. | ಪ್ರಥಮ(ಪೂರಕ) | ಬಿ.ಇಡಿ. | ಒಂದು ವಿಷಯಕ್ಕೆ ರೂ. 100-00 (ಪೂರಕ) |

**ವಿ.ಸೂ.**: 2022-23 ನೇ ಸಾಲಿನಲ್ಲಿ **NEP (UUCMS)** ಮೂಲಕ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗೆ ಪ್ರವೇಶ ಪಡೆದು ಪರೀಕ್ಷಾ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳ ವಿವರವನ್ನು ವಿಶ್ವವಿದ್ಯಾನಿಲಯಕ್ಕೆ ಹಾರ್ಡ್ ಕಾಪಿಯ ಒಂದು ಪ್ರತಿಯನ್ನು ಪರೀಕ್ಷಾ ವಿಭಾಗಕ್ಕೂ ಹಾಗೂ ಮತ್ತೊಂದು ಪ್ರತಿಯನ್ನು ಹಣಕಾಸು ವಿಭಾಗಕ್ಕೂ ಕಡ್ಡಾಯವಾಗಿ ಸಲ್ಲಿಸುವುದು.

ಎಲ್ಲಾ ವಿದ್ಯಾರ್ಥಿಗಳೂ ಸಹ ಈ ಕೆಳಗೆ ನಮೂದಿಸಿರುವ ಇತರೆ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸುವುದು.
**(ಅನ್ವಯಿಸುವ ಶುಲ್ಕಗಳು ಮಾತ್ರ)**

(...03)

| ಕ್ರ.ಸಂ. | ಇತರೆ ಶುಲ್ಕಗಳ ವಿವರ | ಮೊತ್ತ (ರೂ. ಗಳಲ್ಲಿ) |
|---|---|---|
| 1. | ಅಂಕಪಟ್ಟಿ ಶುಲ್ಕ ( ಪ್ರತಿ ಸೆಮಿಸ್ಟರ್‌ಗೆ) | 156-00 |
| 2. | ಆನ್‌ಲೈನ್ ಅರ್ಜಿ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | 25-00* |
| 3. | ಅರ್ಜಿ ಪರಿಶೀಲನಾ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | 10-00* |
| 4. | ಪರೀಕ್ಷಾ ಸಿದ್ಧತಾ ಶುಲ್ಕ (Process fee) ( ಪ್ರತಿ ಸೆಮಿಸ್ಟರ್‌ಗೆ) | 35-00* |

* UUCMS ತಂತ್ರಾಂಶದಲ್ಲಿ ಅರ್ಜಿ ಪರಿಶೀಲನಾ ಶುಲ್ಕದಡಿಯಲ್ಲಿ ಒಟ್ಟು ರೂ. 70.00 ಗಳೆಂದು ನಮೂದಿಸಲಾಗಿದೆ. ಇದನ್ನು ಆನ್‌ಲೈನ್ ಅರ್ಜಿ ಶುಲ್ಕ ರೂ. 25-00 + ಅರ್ಜಿ ಪರಿಶೀಲನಾ ಶುಲ್ಕ ರೂ. 10-00 + ಪರೀಕ್ಷಾ ಸಿದ್ಧತಾ ಶುಲ್ಕ ರೂ. 35-00 ಎಂದು ಅರ್ಥೈಸಿಕೊಳ್ಳುವುದು.

**ಪರೀಕ್ಷಾ ಕೇಂದ್ರ ಹೊಂದಿರುವ ಕಾಲೇಜಿನವರು ತಮ್ಮ ಕೇಂದ್ರದಲ್ಲಿ **ಪರೀಕ್ಷೆ ನಡೆಯುವ ಒಟ್ಟು ದಿನಗಳಲ್ಲಿ ಒಂದು ದಿನದ ಗರಿಷ್ಠ ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದಿಸಿ** ಪ್ರತಿ ವಿದ್ಯಾರ್ಥಿಗೆ ರೂ. 6-00 ಗಳಂತೆ ಪ್ರತ್ಯೇಕ ಬಿಲ್ಲನ್ನು ಸಿದ್ಧಪಡಿಸಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.

ದಿನಾಂಕ: 20.01.2023 ರ **ಸಿಂಡಿಕೇಟ್ ಸಭಾ ನಿರ್ಣಯದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಸರ್ಕಾರದ ಡಿಬಿಟಿ (Direct Beneficiary Transfer) ಯೋಜನೆಯಡಿಯಲ್ಲಿ ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ಜಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸಂಬಂಧಪಟ್ಟ ಕಾಲೇಜುಗಾಗಲಿ ಅಥವಾ ವಿಶ್ವವಿದ್ಯಾನಿಲಯಕ್ಕಾಗಲಿ ವಿದ್ಯಾರ್ಥಿ ವೇತನವು ಮಂಜೂರಾಗದ ಹಿನ್ನೆಲೆಯಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಂದ ಪೂರ್ಣ ಪ್ರಮಾಣದ ಪರೀಕ್ಷಾ ಶುಲ್ಕವನ್ನು ಸೆಮಿಸ್ಟರ್‌ವಾರು ಕಡ್ಡಾಯವಾಗಿ ಪಾವತಿಸಿಕೊಳ್ಳುವುದು (ನವೀನ & ಪೂರಕ) ವಿದ್ಯಾರ್ಥಿಯು ಪರೀಕ್ಷಾ ಶುಲ್ಕ ಪಾವತಿಸಿದಾಕ್ಷಣ ಪರೀಕ್ಷೆ ಬರೆಯಲು ಅರ್ಹನೆಂದು ತಿಳಿಯಬಾರದು. ವಿಶ್ವವಿದ್ಯಾನಿಲಯದ ನಿಯಮಾನುಸಾರ ಅರ್ಹತೆಯಿದ್ದಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ. ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರವನ್ನು ಬದಲಾಯಿಸುವಂತಿಲ್ಲ.**

**ವಿಶ್ವವಿದ್ಯಾನಿಲಯದ ನಿಯಮಾನುಸಾರ ಪರೀಕ್ಷಾ ಶುಲ್ಕ ಪಾವತಿಸಲು ಅರ್ಹತೆ ಇಲ್ಲದಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಗಳಿಂದ ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಸ್ವೀಕರಿಸಲು ಹಾಗೂ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.**

ವಿಶ್ವವಿದ್ಯಾನಿಲಯದಿಂದ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ನಲ್ಲಿ ಪ್ರವೇಶಾನುಮೋದನೆ ಪಡೆದ ಎಲ್ಲಾ ಅರ್ಹ ವಿದ್ಯಾರ್ಥಿಗಳು ತಮ್ಮ ಲಾಗಿನ್ ಮೂಲಕ ಪರೀಕ್ಷಾ ಶುಲ್ಕವನ್ನು ವಿಶ್ವವಿದ್ಯಾನಿಲಯದ ನಿಧಿಗೆ **ನೇರವಾಗಿ** UUCMS ತಂತ್ರಾಂಶದ ಮೂಲಕ ನಿಗದಿತ ದಿನಾಂಕದೊಳಗೆ ಪಾವತಿಸುವುದು. **ಕಾಲೇಜಿನವರು ಪರೀಕ್ಷಾ ಶುಲ್ಕ ಪಾವತಿಸಿರುವ ಪಟ್ಟಿಯನ್ನು ದ್ವಿ-ಪ್ರತಿಗಳಲ್ಲಿ ಪರೀಕ್ಷಾ ವಿಭಾಗಕ್ಕೆ ಒಂದು ಪ್ರತಿ ಮತ್ತು ಹಣಕಾಸು ವಿಭಾಗಕ್ಕೆ ಮತ್ತೊಂದು ಪ್ರತಿಯನ್ನು ತಪ್ಪದೇ ಸಲ್ಲಿಸುವುದು.**

(....04)

**ಆಂತರಿಕ ಅಂಕಗಳನ್ನು ಸಲ್ಲಿಸುವ ಕುರಿತು ಸೂಚನೆಗಳು:**

- ಸೈದ್ಧಾಂತಿಕ (Theory) ಪರೀಕ್ಷೆಗಳು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಅಧಿಸೂಚನೆ ಪ್ರತಿಯಲ್ಲಿ ತಿಳಿಸಿರುವ ದಿನಾಂಕದೊಳಗೆ MAAC ಸಮಿತಿಯ ಅಧ್ಯಕ್ಷರು/ ಸದಸ್ಯರುಗಳು ಸಂಬಂಧಿಸಿದ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಆಂತರಿಕ ಅಂಕಗಳ ಹಾಗೂ ವಿದ್ಯಾರ್ಥಿಗಳ ಹಾಜರಾತಿಯ ವಿವರದ ಬಗ್ಗೆ ಪರಿಶೀಲಿಸಿ ದೃಢೀಕರಿಸತಕ್ಕದ್ದು.

- ಆಂತರಿಕ ಅಂಕಗಳನ್ನು UUCMS ತಂತ್ರಾಂಶದಲ್ಲಿ ನಮೂದಿಸುವ ಮುನ್ನ ಸಂಬಂಧಪಟ್ಟ MAAC ಸಮಿತಿಯ ಅಧ್ಯಕ್ಷರು/ ಸದಸ್ಯರುಗಳು ದೃಢೀಕರಿಸಿ ಸಲ್ಲಿಸಿರುವ ವಿವರಗಳನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಮತ್ತೊಮ್ಮೆ ಸರಿಯಾಗಿ ಪರಿಶೀಲಿಸಿ ದೃಢೀಕರಿಸಿ ನಮೂದಿಸುವುದು.

- ನಮೂದಿಸಿದ ಪಟ್ಟಿಯನ್ನು (Hard copy) "ಮಾನ್ಯ ಕುಲಸಚಿವರು(ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು" ಇವರ ಹೆಸರಿಗೆ ಪರೀಕ್ಷಾ ವಿಭಾಗದ ಟಪಾಲ್ (Despatch) ನಲ್ಲಿ ಒಂದು ಪ್ರತಿಯನ್ನು ಸಲ್ಲಿಸುವುದು.

- ಸಲ್ಲಿಸುವಾಗ ವಿಳಂಭವಾದಲ್ಲಿ / ಸರಿಯಾಗಿ ನೀಡದಿದ್ದಲ್ಲಿ **ದಿನವೊಂದಕ್ಕೆ ರೂ. 1,000/- ಗಳಂತೆ ಗರಿಷ್ಠ ರೂ. 10,000-00 (ಹತ್ತು ಸಾವಿರ) ಗಳನ್ನು ದಂಡವಾಗಿ ವಿಧಿಸಲಾಗುತ್ತದೆ.**

- ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳನ್ನು ನೀಡುವುದು ಪ್ರಾಂಶುಪಾಲರ ಜವಾಬ್ದಾರಿಯಾಗಿದ್ದು, ಯಾವುದೇ ರೀತಿಯ ತಪ್ಪುಗಳಾಗದಂತೆ ಎಚ್ಚರಿಕೆ ವಹಿಸುವುದು.

**ಫಲಿತಾಂಶ ಪ್ರಕಟಗೊಂಡ ನಂತರ ಯಾವುದೇ ಕಾರಣಕ್ಕೂ ಆಂತರಿಕ ಅಂಕಗಳನ್ನು ಬದಲಿಸುವುದಿಲ್ಲ.**

**ಆದೇಶದ ಮೇರೆಗೆ**

28/7/23

**ಕುಲಸಚಿವರು(ಪರೀಕ್ಷಾಂಗ)**

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಗೆ,**

**ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಸ್ನಾತಕ ಶಿಕ್ಷಣ (ಬಿ.ಇಡಿ.) ಪದವಿ ಕಾಲೇಜುಗಳು,**
**ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**

**ಪ್ರತಿಗಳು :**

1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಎಂ.ಎಸ್. ಬಿಲ್ಡಿಂಗ್-2, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಉಪಕುಲಸಚಿವರು(ಶೈಕ್ಷಣಿಕ ವಿಭಾಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - **ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಇಂದೇ ಪ್ರಕಟಿಸುವುದು ಹಾಗೂ ಎಲ್ಲಾ ಬಿ.ಇಡಿ. ಕಾಲೇಜುಗಳಿಗೆ ಇ-ಮೇಲ್ ಕಳುಹಿಸುವುದು.**
8. ಫಲಿತಾಂಶ ಗಣಕೀಕರಣ ವಿಭಾಗ, ಪರೀಕ್ಷಾ ಭವನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
9. ಕಛೇರಿ ಪ್ರತಿ.